# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ದ್ವಿತೀಯ ಪಿ.ಯು.ಸಿ., ಪರೀಕ್ಷಾ ಕಾರ್ಯದಲ್ಲಿ ಮತ್ತು ಉತ್ತರ ಪತ್ರಿಕೆ ಮೌಲ್ಯಮಾಪನ ಕಾರ್ಯದಲ್ಲಿ ನಿರತರಾಗುವ ಸಿಬ್ಬಂದಿಗೆ ಸಂಭಾವನೆ ದರಗಳನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ:ಇಡಿ 40 ಟಿಪಿಯು 2013 ದಿನಾಂಕ:21-06-2013.

2) ಸರ್ಕಾರದ ಆದೇಶ ಸಂಖ್ಯೆ:ಇಡಿ 40 ಟಿಪಿಯು 2013 ದಿನಾಂಕ:29-10-2014

3) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಏಕ ಕಡತ ಸಂಖ್ಯೆ:ಪಪೂಶಿಇ/ಪರೀಕ್ಷೆ/ಸಂ.ಪ./2015-16.

* * *

**ಪ್ರಸ್ತಾವನೆ:**

ಮೇಲೆ (1) ಮತ್ತು (2) ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ದ್ವಿತೀಯ ಪಿ.ಯು.ಸಿ., ಪರೀಕ್ಷಾ ಕಾರ್ಯದಲ್ಲಿ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯದಲ್ಲಿ ನಿರತರಾಗುವ ಸಿಬ್ಬಂದಿಯವರಿಗೆ ಸಂಭಾವನೆ ಮತ್ತು ಭತ್ಯೆಗಳ ದರಗಳನ್ನು ಕಳೆದ ಬಾರಿ ಪರಿಷ್ಕರಿಸಿ ನಿಗದಿಪಡಿಸಲಾಗಿದೆ. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ಮೇಲೆ (3)ರಲ್ಲಿ ಓದಲಾದ ಏಕ ಕಡತದಲ್ಲಿ ಪ್ರಸ್ತಾವನೆ ಸಲ್ಲಿಸಿ, ಸದರಿ ಸಂಭಾವನೆ ದರ, ದಿನಭತ್ಯೆ, ಸಾರಿಗೆ ಭತ್ಯೆ ಹಾಗೂ ಸ್ಥಳೀಯ ಸಾರಿಗೆ ಭತ್ಯೆ ಇತ್ಯಾದಿ ದರಗಳನ್ನು ಪರಿಷ್ಕರಿಸಿ, ಮೂರು ವರ್ಷಗಳಾಗಿರುವುದರಿಂದ ಸದರಿ ದರಗಳನ್ನು ಪರಿಷ್ಕರಿಸಲು ಸರ್ಕಾರವನ್ನು ಕೋರಿದ್ದಾರೆ.

JD (Exam) 03/4/16

ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಸಂಭಾವನೆ ದರ ಮತ್ತು ಭತ್ಯೆಗಳನ್ನು ಶೇಕಡ 30ರಷ್ಟು ಹೆಚ್ಚಿಸಲು ನಿರ್ಣಯಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 33 ಟಿಪಿಯು 2016,**
**ಬೆಂಗಳೂರು, ದಿನಾಂಕ:24-03-2016.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಹಿನ್ನೆಲೆಯಲ್ಲಿ, ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ದ್ವಿತೀಯ ಪಿ.ಯು.ಸಿ., ಪರೀಕ್ಷಾ ಕಾರ್ಯದಲ್ಲಿ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯದಲ್ಲಿ ನಿರತರಾಗುವ ಸಿಬ್ಬಂದಿಯವರಿಗೆ ಸಂಭಾವನೆ ಮತ್ತು ಭತ್ಯೆಗಳ ದರಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವಂತೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪರಿಷ್ಕರಿಸಿ, ಆದೇಶಿಸಿದೆ. ಪರಿಷ್ಕೃತ ಸಂಭಾವನೆ ಮತ್ತು ಭತ್ಯೆಗಳ ದರವು ಮುಂದಿನ ಮೂರು ವರ್ಷಗಳವರೆಗೆ ಜಾರಿಯಲ್ಲಿರುತ್ತದೆ.

**ಷರತ್ತುಗಳು**

1. ಯು.ಜಿ.ಸಿ. ವೇತನ ಪಡೆಯುವ ಉಪನ್ಯಾಸಕರುಗಳು ಮೌಲ್ಯಮಾಪನ ಕಾರ್ಯದಲ್ಲಿ ಪಾಲ್ಗೊಂಡಲ್ಲಿ ಅವರಿಗೆ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಮಾತ್ರ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳನ್ವಯ ನೀಡತಕ್ಕದ್ದು ಹಾಗೂ ಇವರುಗಳಿಗೆ ಬೇರೆ ಯಾವುದೇ ಸಂಭಾವನೆ ನೀಡತಕ್ಕದ್ದಲ್ಲ.

2. ಈ ಪರೀಕ್ಷಾ/ಮೌಲ್ಯಮಾಪನ ಕಾರ್ಯದಲ್ಲಿ ಪಾಲ್ಗೊಳ್ಳುವ ಬೋಧಕ ಸಿಬ್ಬಂದಿಗಳು ಎಸಗುವ ತಪ್ಪುಗಳಿಗೆ ವಿಧಿಸಲಾಗುವ ದಂಡದ ಬಗ್ಗೆ ಸೂಕ್ತವಾದ ನಿಯಮಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರತಕ್ಕದ್ದು.
3. ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2202 ಸಾಮಾನ್ಯ ಶಿಕ್ಷಣ-02-ಪ್ರೌಢ ಶಿಕ್ಷಣ-108-ಪರೀಕ್ಷೆಗಳು-0-01-ಪದವಿ ಪೂರ್ವ ಶಿಕ್ಷಣ(ಪರೀಕ್ಷೆ ವೆಚ್ಚಗಳು) ಯೋಜನೇತರ ಅಡಿಯಲ್ಲಿ ಪ್ರಸ್ತುತ ವರ್ಷದಲ್ಲಿ ಇಲಾಖೆಗೆ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 75 ವೆಚ್ಚ-8/2016 ದಿನಾಂಕ:22/02/2016 ಮತ್ತು ದಿನಾಂಕ:29-02-2016ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

24/3/16
(ವಿ.ರಾಮಕೃಷ್ಣಯ್ಯ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ(ಪದವಿ ಪೂರ್ವ ಶಿಕ್ಷಣ).

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ

## ಸರ್ಕಾರದ ಆದೇಶ ಸಂಖ್ಯೆ: ಇಡಿ 33 ಟಿಪಿಯು 2016, ಬೆಂಗಳೂರು, ದಿನಾಂಕ:24-03-2016ರ ಅನುಬಂಧ.

| ಕ್ರಮ ಸಂಖ್ಯೆ | ವಿವರ/ಬಾಬ್ತು | ಹಾಲಿ ಚಾಲ್ತಿಯಲ್ಲಿರುವ ದರ (ರೂ.) ಮತ್ತು ಸಿಬ್ಬಂದಿ ಪ್ರಮಾಣ | ಹೆಚ್ಚಿಸಿ ನಿಗದಿಪಡಿಸಿದ ದರ (ರೂ.) ಮತ್ತು ಸಿಬ್ಬಂದಿ ಪ್ರಮಾಣ |
|---|---|---|---|
| 1 | 2 | 3 | 4 |
| ಎ) ವಾರ್ಷಿಕ ಮತ್ತು ಸಪ್ಲಿಮೆಂಟರಿ, ಎರಡು ಪರೀಕ್ಷೆಗೂ ಒಮ್ಮೆಲೆ ಪ್ರಶ್ನೆಪತ್ರಿಕೆಯ ಹಸ್ತಪ್ರತಿ ತಯಾರಿಕೆಗೆ ಮತ್ತು ಕಾರ್ಯಾಗಾರದ ಅಧಿಕಾರಿಗಳು ಹಾಗು ಸಿಬ್ಬಂದಿಗೆ ಸಂಭಾವನೆ | | | |
| 1 | 3(ಮೂರು)ಗಂಟೆ ಅವಧಿಯ ಕನ್ನಡ ಆವೃತ್ತಿಯಿಲ್ಲದ ಪ್ರಶ್ನೆಪತ್ರಿಕೆ ತಯಾರಿಸಲು | ರೂ.1333-00 ಪ್ರತಿಯೊಬ್ಬರಿಗೆ | ರೂ.1735-00 ಪ್ರತಿಯೊಬ್ಬರಿಗೆ |
| 2 | 3(ಮೂರು)ಗಂಟೆ ಅವಧಿಯ ಕನ್ನಡ ಆವೃತ್ತಿ ಸಹಿತ ಪ್ರಶ್ನೆಪತ್ರಿಕೆ ತಯಾರಿಸಲು | ರೂ.1555-00 ಪ್ರತಿಯೊಬ್ಬರಿಗೆ | ರೂ.2020-00 ಪ್ರತಿಯೊಬ್ಬರಿಗೆ |
| 3 | 3 (ಮೂರು) ಗಂಟೆ ಅವಧಿಗಿಂತ ಕಡಿಮೆ ಅವಧಿಯ ಕನ್ನಡ ಆವೃತ್ತಿ ಸಹಿತ ಪ್ರಶ್ನೆಪತ್ರಿಕೆ ತಯಾರಿಸಲು. | ರೂ.1001-00 ಪ್ರತಿಯೊಬ್ಬರಿಗೆ | ರೂ.1300-00 ಪ್ರತಿಯೊಬ್ಬರಿಗೆ |
| 4 | ಚೇರ್ಮನ್ ಸಂಭಾವನೆ-(ಪ್ರತಿ ವಿಷಯಕ್ಕೆ ಒಬ್ಬರು) ಪ್ರಶ್ನೆಪತ್ರಿಕೆ ತಯಾರಿಕೆಯಲ್ಲಿ ಸಮನ್ವಯ ಮಾಡಲು ಹಾಗು ಉಸ್ತುವಾರಿ ಮಾಡಲು (ಪ್ರಶ್ನೆ ಪತ್ರಿಕೆ ತಯಾರಿಕೆ ಸಂಭಾವನೆ ಜೊತೆಗೆ) | ರೂ.671-00 ಪ್ರತಿಯೊಬ್ಬರಿಗೆ | ರೂ.870-00 ಪ್ರತಿಯೊಬ್ಬರಿಗೆ |
| 5 | **ಪ್ರಶ್ನೆಪತ್ರಿಕೆ ತಯಾರಿಕಾ ಕಾರ್ಯಾಗಾರಗಳ ಸಿಬ್ಬಂದಿಗಳು:** | | |
| | 1. ಕಾರ್ಯಾಗಾರದ ಪ್ರಭಾರದಲ್ಲಿರುವ ಅಧಿಕಾರಿ (ಒಂದು ಕಾರ್ಯಗಾರಕ್ಕೆ ಒಬ್ಬರಂತೆ) | ರೂ.1109-00 ಪ್ರತಿಯೊಬ್ಬರಿಗೆ | ರೂ.1440-00 ಪ್ರತಿಯೊಬ್ಬರಿಗೆ |
| | 2. ಸಹಾಯಕರು(3) – ಕಛೇರಿ ಕೆಲಸಕ್ಕೆ | ರೂ.671-00 ಪ್ರತಿಯೊಬ್ಬರಿಗೆ | ರೂ.870-00 ಪ್ರತಿಯೊಬ್ಬರಿಗೆ |
| | 3. ವಾಹನ ಚಾಲಕರು (3) | ರೂ.447-00 ಪ್ರತಿಯೊಬ್ಬರಿಗೆ | ರೂ.580-00 ಪ್ರತಿಯೊಬ್ಬರಿಗೆ |
| | 4. ಗ್ರೂಪ್-ಡಿ ಸಿಬ್ಬಂದಿ-ಕೇಂದ್ರ ಕಛೇರಿ ಕೆಲಸಕ್ಕೆ ಇಬ್ಬರು (2) ಹಾಗೂ ಪ್ರತಿ ಕಾರ್ಯಾಗಾರಕ್ಕೆ ಒಬ್ಬರು(1) | ರೂ.339-00 ಪ್ರತಿಯೊಬ್ಬರಿಗೆ | ರೂ.440-00 ಪ್ರತಿಯೊಬ್ಬರಿಗೆ |

**ವಿ.ಸೂ:-**

1) ಭಾಷಾ ವಿಷಯಗಳಿಗೆ ಕನ್ನಡ ಅಥವಾ ಆಂಗ್ಲ ಅನುವಾದಗಳಿರುವುದಿಲ್ಲ.
2) ಯಾವುದೇ ವಿಷಯದಲ್ಲಿ ಅಗತ್ಯತೆಗನುಗುಣವಾಗಿ ಪ್ರಶ್ನೆಪತ್ರಿಕಾ ತಯಾರಕರ ಸಂಖ್ಯೆಯನ್ನು ಹಾಗೂ ಕಾರ್ಯಾಗಾರಗಳ ಸಂಖ್ಯೆಯನ್ನು ನಿರ್ದೇಶಕರು ನಿಗದಿಗೊಳಿಸಬಹುದು.
3) ಕ್ರಮ ಸಂಖ್ಯೆ 1 ರಿಂದ 4 ರವರೆಗಿನ ಸಿಬ್ಬಂದಿಯವರು ಕೆಸಿಎಸ್‌ಆರ್ ನಿಯಮಗಳನ್ವಯ ಟಿ.ಎ. ಡಿ.ಎ. ಪಡೆಯಲು ಅರ್ಹರಾಗಿರುತ್ತಾರೆ.
4) ಕ್ರಮ ಸಂಖ್ಯೆ 5 ರ ಸಿಬ್ಬಂದಿಯವರನ್ನು ಅವಶ್ಯಕತೆಗೆ ತಕ್ಕಷ್ಟು ನಿರ್ದೇಶಕರು ನೇಮಕ ಮಾಡಿಕೊಳ್ಳಬಹುದು.

| ಬಿ) ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆ ಮುದ್ರಣ ಕೇಂದ್ರ ಕಛೇರಿಯಲ್ಲಿ ಶೇಖರಣೆಸುವುದು ಹಾಗೂ ಮಾರ್ಗಾಧಿಕಾರಿಗಳಿಗೆ ವಿತರಿಸುವ ಕಾರ್ಯದಲ್ಲಿ ಭಾಗಿಯಾಗುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಸಂಭಾವನೆ (ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆ ಪ್ರತ್ಯೇಕ ಬಾಬ್ತು) | | | |
|---|---|---|---|
| 1 | ನಿರ್ದೇಶಕರು | ರೂ.2002–00 | ರೂ.2605–00 |
| 2 | ಜಂಟಿ ನಿರ್ದೇಶಕರು (ಪರೀಕ್ಷೆ) | ರೂ.1663–00 | ರೂ.2160–00 |
| 3 | ಉಪನಿರ್ದೇಶಕರು (ಪರೀಕ್ಷೆ) | ರೂ.1333–00 | ರೂ. 1735–00 |
| 4 | ಸಹಾಯಕ ನಿರ್ದೇಶಕರು / ಶಾಖಾಧಿಕಾರಿಗಳು (ಪ್ರತಿಯೊಬ್ಬರಿಗೆ) | ರೂ.1001–00 | ರೂ.1300–00 |
| 5 | ಸಹಾಯಕರು (ಪ್ರತಿಯೊಬ್ಬರಿಗೆ) | ರೂ.671–00 | ರೂ.870–00 |
| 6 | ವಾಹನ ಚಾಲಕರು (ಪ್ರತಿಯೊಬ್ಬರಿಗೆ) | ರೂ.447–00 | ರೂ.580–00 |
| 7 | ಗ್ರೂಪ್–ಡಿ (ಪ್ರತಿಯೊಬ್ಬರಿಗೆ) | ರೂ.339–00 | ರೂ.440–00 |

ವಿ ಸೂ :– ನಿರ್ದೇಶಕರು ಅವರಿಗೆ ಸರಿಕಂಡ ಹಾಗೂ ಅಗತ್ಯಕ್ಕೆ ತಕ್ಕಷ್ಟು ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನೇಮಿಸಿಕೊಳ್ಳಬಹುದು.

| ಸಿ) ಪ್ರಶ್ನೆಪತ್ರಿಕೆ ಮತ್ತು ಲೇಖನ ಸಾಮಗ್ರಿಗಳನ್ನು ನಿಗದಿಪಡಿಸಿದ ಮಾರ್ಗಗಳ ಮೂಲಕ ತೆಗೆದುಕೊಂಡು ಹೋಗಿ ವಿತರಿಸುವ ಮಾರ್ಗಾಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಸಂಭಾವನೆ (ಪ್ರತಿ ನಿಯೋಜನೆಗೂ ಪ್ರತ್ಯೇಕ ಸಂಭಾವನೆ – ಪ್ರಶ್ನೆಪತ್ರಿಕೆ ಮತ್ತು ಲೇಖನ ಸಾಮಗ್ರಿ ಪ್ರತ್ಯೇಕ ಬಾಬ್ತು) ಬೆಂಗಳೂರು ನಗರದ ವಿತರಣೆ ಹೊರತುಪಡಿಸಿ (ಪ್ರತಿಯೊಬ್ಬರಿಗೆ) | | | |
|---|---|---|---|
| 1 | ಮಾರ್ಗಾಧಿಕಾರಿಗಳು (ಒಬ್ಬರಿಗೆ) | ರೂ.671–00 ಕ.ನಾ.ಸೇ.ನಿ. ಪ್ರಕಾರ ಭತ್ಯೆ | ರೂ.870–00 |
| 2 | ಮಾರ್ಗ ಸಹಾಯಕರು (ಒಬ್ಬರಿಗೆ) | ರೂ.447–00 ಕ.ನಾ.ಸೇ.ನಿ. ಪ್ರಕಾರ ಭತ್ಯೆ | ರೂ.580–00 |
| 3 | ಗ್ರೂಪ್–ಡಿ ಸಿಬ್ಬಂದಿ (ಒಬ್ಬರಿಗೆ) | ರೂ.224–00 ಕ.ನಾ.ಸೇ.ನಿ. ಪ್ರಕಾರ ಭತ್ಯೆ | ರೂ.290–00 |

ವಿ. ಸೂ : ನಿರ್ದೇಶಕರು ಮಾರ್ಗಗಳ ಸಂಖ್ಯೆ ಹಾಗೂ ಕೆಲಸದ ಪ್ರಮಾಣದ ಆಧಾರದ ಮೇಲೆ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಸಂಖ್ಯೆ ಮತ್ತು ಸಾದಿಲ್ವಾರು ವೆಚ್ಚವನ್ನು ನಿಗದಿಪಡಿಸುವರು (ಪ್ರತ್ಯೇಕ ಸ್ಥಳೀಯ ಸಾರಿಗೆ ಭತ್ಯೆ ಇರುವುದಿಲ್ಲ)

| ಡಿ) ಪ್ರಶ್ನೆಪತ್ರಿಕೆಗಳನ್ನು ಆಯಾ ಪರೀಕ್ಷಾ ದಿನಗಳಂದು ಬೆಂಗಳೂರು ನಗರದ ಪರೀಕ್ಷಾ ಕೇಂದ್ರಗಳಿಗೆ ವಿತರಿಸುವ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸಂಭಾವನೆ. | | | |
|---|---|---|---|
| 1 | ನಿರ್ದೇಶಕರು | ರೂ.2002–00 | ರೂ.2605–00 |
| 2 | ಜಂಟಿ ನಿರ್ದೇಶಕರು (ಪರೀಕ್ಷೆ) | ರೂ.1663–00 | ರೂ.2160–00 |
| 3 | ಉಪ ನಿರ್ದೇಶಕರು (ಪರೀಕ್ಷೆ) | ರೂ.1333–00 | ರೂ.1730–00 |
| 4 | ಮಾರ್ಗ ಸಹಾಯಕರು/ಕಚೇರಿ ಸಹಾಯಕರು | ರೂ.1001–00 | ರೂ.1300–00 |

| | | | |
|---|---|---|---|
| 5 | ವಾಹನ ಚಾಲಕರು (ಪ್ರತಿಯೊಬ್ಬರಿಗೆ) | ರೂ.671-00 | ರೂ.870-00 |
| 6 | ಗ್ರೂಪ್-ಡಿ (ಪ್ರತಿಯೊಬ್ಬರಿಗೆ) | ರೂ.554-00 | ರೂ.720-00 |

ವಿ ಸೂ :- ಪ್ರಶ್ನೆ ಪತ್ರಿಕೆಗಳ ವಿತರಣಾ ಕೆಲಸದ ಪರಿಮಾಣಕ್ಕೆ ತಕ್ಕಷ್ಟು ಸಂಖ್ಯೆಯ ಅಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಯನ್ನು ನಿರ್ದೇಶಕರು ನಿಯೋಜಿಸುವರು.

| ಇ) ಪರೀಕ್ಷಾ ಕೇಂದ್ರಗಳ ಉಸ್ತುವಾರಿ ಸಿಬ್ಬಂದಿಗೆ ಸಂಭಾವನೆ (ಪ್ರತಿ ದಿನದ ಪ್ರತಿ ಅವಧಿಗೆ - ಪ್ರತಿಯೊಬ್ಬರಿಗೆ | | | |
|---|---|---|---|
| 1 | ಮುಖ್ಯ ಅಧೀಕ್ಷಕರು (ಪ್ರತಿ ಕೇಂದ್ರಕ್ಕೆ ಒಬ್ಬರಂತೆ) | ರೂ.116-00 | ರೂ.150-00 |
| 2 | ಸಹಮುಖ್ಯ ಅಧೀಕ್ಷಕರು (ಪ್ರತಿ ಕೇಂದ್ರಕ್ಕೆ ಒಬ್ಬರಂತೆ) | ರೂ.85-00 | ರೂ.110-00 |
| 3 | ಬ್ಲಾಕ್ ಅಧೀಕ್ಷಕರು (ಒಬ್ಬರು) | ರೂ.85-00 | ರೂ.110-00 |
| 4 | ಕಚೇರಿ ಅಧೀಕ್ಷಕರು (ಮುಖ್ಯ ಅಧೀಕ್ಷಕರಿಗೆ ಸಹಾಯ ಮಾಡಲು ಒಬ್ಬರು ಬೋಧಕ ಸಿಬ್ಬಂದಿ) | ರೂ.70-00 | ರೂ.90-00 |
| 5 | ಕೊಠಡಿ ಮೇಲ್ವಿಚಾರಕರು (ಪ್ರತಿ ಕೊಠಡಿಗೆ ಒಬ್ಬರು) | ರೂ.70-00 | ರೂ.90-00 |
| 6 | ರಿಲೀವಿಂಗ್ ಕೊಠಡಿ ಮೇಲ್ವಿಚಾರಕರು (ಪ್ರತಿ 5 ಕೊಠಡಿ ಮೇಲ್ವಿಚಾರಕರಿಗೆ ಒಬ್ಬರಂತೆ ಹಾಗೂ ಆಯಾ ದಿನದ ಆಯಾ ಅವಧಿಗೆ ಕನಿಷ್ಠ 5 ಕೊಠಡಿಗಳಲ್ಲಿ ಪರೀಕ್ಷೆ ನಡೆಯುತ್ತಿದ್ದಲ್ಲಿ ಮಾತ್ರ) | ರೂ.70-00 | ರೂ.90-00 |
| 7 | ಅಧೀಕ್ಷಕರು (ಒಬ್ಬರು) (ಅಧೀಕ್ಷಕ ಹುದ್ದೆ ಇರುವಲ್ಲಿ ಮಾತ್ರ) | ರೂ.70-00 | ರೂ.90-00 |
| 8 | ಕ್ಲರ್ಕ್ ಕಂ ಬೆರಳಚ್ಚುಗಾರರು | ರೂ.55-00 | ರೂ.70-00 |
| 9. | ಅಟೆಂಡರ್/ಗ್ರೂಪ್-ಡಿ | ರೂ.39-00 | ರೂ.50-00 |
| 10. | ಸ್ಥಳೀಯ ಸಹಮುಖ್ಯ ಅಧೀಕ್ಷಕರಿಗೆ ಸಾರಿಗೆ ಭತ್ಯೆ (ಒಂದೇ ಊರಿನ/ನಗರದ/ಸ್ಥಳದಲ್ಲಿ ವಾಸವಾಗಿದ್ದು/ ಕೆಲಸ ನಿರ್ವಹಿಸುತ್ತಿದ್ದು, ಅದೇ ನಗರದ/ಸ್ಥಳದ ಬೇರೊಂದು ಕಾಲೇಜಿಗೆ ನಿಯೋಜಿಸಲ್ಪಟ್ಟಾಗ)<br>ಅ) ಬೆಂಗಳೂರು ನಗರದಲ್ಲಿ.<br>ಆ) ಬೆಂಗಳೂರು ನಗರ ಹೊರತುಪಡಿಸಿ ಇತರೆ ಸ್ಥಳಗಳಲ್ಲಿ | ರೂ.154-00<br>ರೂ.105-00 | ರೂ.200-00<br>ರೂ.135-00 |
| 11. | ಕರ್ನಾಟಕ ಸಂಗೀತ, ಹಿಂದೂಸ್ಥಾನಿ ಸಂಗೀತ ಹಾಗೂ ಭಾಷಾ ವಿಷಯದಲ್ಲಿ ಪ್ರಾಯೋಗಿಕ ಪರೀಕ್ಷೆ ಅಥವಾ ಓರಲ್ ಪರೀಕ್ಷೆ ನಡೆಸುವ ಉಪನ್ಯಾಸಕರಿಗೆ/ಮೌಲ್ಯಮಾಪಕರಿಗೆ ಸಂಭಾವನೆ (ಪ್ರಶ್ನೆಪತ್ರಿಕೆ ಸಿದ್ಧಪಡಿಸಲು, ಪರೀಕ್ಷೆ ನಡೆಸಲು ಮೌಲ್ಯಮಾಪನ ಮಾಡಲು) | ಕನಿಷ್ಠ ರೂ.185-00 ಹಾಗೂ 10 ಅಭ್ಯರ್ಥಿಗಳಿಗೆ ಮೀರಿದಲ್ಲಿ ಪ್ರತಿ ಅಭ್ಯರ್ಥಿಗೆ ಹೆಚ್ಚುವರಿಯಾಗಿ ರೂ.17-00 | ಕನಿಷ್ಠ ರೂ.240-00 ಹಾಗೂ 10 ಅಭ್ಯರ್ಥಿಗಳಿಗೆ ಮೀರಿದಲ್ಲಿ ಪ್ರತಿ ಅಭ್ಯರ್ಥಿಗೆ ಹೆಚ್ಚುವರಿಯಾಗಿ ರೂ.20-00 |
| 12 | ಕುರುಡ/ಕುಂಟ ಅಭ್ಯರ್ಥಿಗಳಿಗೆ ಬರವಣಿಗೆ ಸಹಾಯಕ ಈ ಬಾಬ್ತಿನಿಂದ ಸರ್ಕಾರಕ್ಕೆ ಆರ್ಥಿಕ ವೆಚ್ಚವಾಗುವುದಿಲ್ಲ ಇದನ್ನು ಅಭ್ಯರ್ಥಿಯೇ ಬರವಣಿಗೆ ಸಹಾಯಕರಿಗೆ ನೀಡುವುದು. | ರೂ.62-00 | ರೂ.80-00 |

| 13 | ಅಭ್ಯರ್ಥಿಗಳ ಸಂಖ್ಯೆ | ಸಹಾಯಕರು | ಬೆರಳಚ್ಚುಗಾರರು | ಅಟೆಂಡರ್/ಗ್ರೂಪ್–ಡಿ ಸಿಬ್ಬಂದಿ |
|---|---|---|---|---|
| | 001–200<br>201–500<br>501–750<br>751–1000<br>1001ಕ್ಕೆ ಮೇಲ್ಪಟ್ಟು | 1<br>2<br>3<br>4<br>6 | 1<br>1<br>2<br>2<br>3 | ಕನಿಷ್ಠ ಒಬ್ಬರು ಜವಾನರು ಹಾಗೂ ಒಬ್ಬರು ವಾಟರ್ ಬಾಯ್ ಅಥವಾ ಪ್ರತಿ 75 ಪರೀಕ್ಷಾರ್ಥಿಗಳಿಗೆ ಒಬ್ಬ ಜವಾನ ಹಾಗೂ ಒಬ್ಬ ವಾಟರ್ ಬಾಯ್ ಹಾಗೂ ಮುಂದಿನ ಭಿನ್ನಾಂಕ 40 ಮೇಲ್ಪಟ್ಟಲ್ಲಿ ಮತ್ತೊಬ್ಬರಂತೆ |

ವಿ ಸೂ :–

1) ಬ್ಲಾಕ್ ಸೂಪರಿಂಟೆಂಡೆಂಟ್ : ಯಾವುದೇ ವಿಷಯದ ಪರೀಕ್ಷೆಯಂದು ಅಭ್ಯರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು ಕಾಲೇಜು ಕಟ್ಟಡದಲ್ಲಿ ಸ್ಥಳಾವಕಾಶ ಸಾಲದೆ ಹೋದಾಗ (ಕ್ರಮ ಸಂಖ್ಯೆ 3) ಆ ವಿಷಯಕ್ಕೆ ಮಾತ್ರ ಕಾಲೇಜು ಆವರಣಕ್ಕೆ ಹತ್ತಿರವಾಗಿರುವ ಹಾಗೂ ಆ ಕಾಲೇಜಿಗೆ ಸಂಬಂಧಪಡದ ಬೇರೊಂದು ಶಾಲಾ ಕಾಲೇಜಿನ ಕಟ್ಟಡದಲ್ಲಿ ಪರೀಕ್ಷೆ ನಡೆಸಿದಾಗ ಮಾತ್ರ ಬ್ಲಾಕ್ ಅಧೀಕ್ಷಕರನ್ನು ನೇಮಿಸಿಕೊಳ್ಳಬಹುದು.
2) ಕಚೇರಿ ಅಧೀಕ್ಷಕರು (ಬೋಧಕರು): ಆಯಾ ದಿನದ ಆಯಾ ಅವಧಿಗೆ ಕನಿಷ್ಠ 50ಕ್ಕಿಂತ ಹೆಚ್ಚಿನ ಅಭ್ಯರ್ಥಿಗಳಿದ್ದಲ್ಲಿ ಮಾತ್ರ ಕಚೇರಿ ಅಧೀಕ್ಷಕರನ್ನು ನೇಮಿಸಿಕೊಳ್ಳಬಹುದು (ಕ್ರಮ ಸಂಖ್ಯೆ:4).
3) ಸಾದಿಲ್ವಾರು: ಅಗತ್ಯ ಮತ್ತು ಸಂದರ್ಭಾನುಸಾರ ತಮ್ಮ ವಿವೇಚನೆ ಮೇರೆಗೆ ನಿರ್ದೇಶಕರು ಮಂಜೂರು ಮಾಡಬಹುದು.

| **ಎಫ್) ಹಸ್ತಪ್ರತಿಯ ಪ್ರಶ್ನೆಪತ್ರಿಕೆ ಅಥವಾ ಮಾದರಿ ಉತ್ತರಗಳನ್ನು ಬೆರಳಚ್ಚು/ಸ್ಟೆನ್ಸಿಲ್ ಮಾಡುವ ಹಾಗೂ ಪ್ರತಿಗಳನ್ನು ತೆಗೆಯುವ ಸಿಬ್ಬಂದಿಗೆ ಸಂಭಾವನೆ** | | | |
|---|---|---|---|
| 1 | ಒಂದು ವಿಷಯದ ಪ್ರಶ್ನೆಪತ್ರಿಕೆಯನ್ನು ಬೆರಳಚ್ಚು/ಡಿಟಿಪಿ ಸ್ಟೆನ್ಸಿಲ್ ಮಾಡಿ ಪರಿಶೀಲಿಸಲು (ಅವಶ್ಯವಿದ್ದಲ್ಲಿ) | ರೂ.185–00 | ರೂ.240–00 |
| 2 | ಒಂದು ವಿಷಯದ ಮಾದರಿ ಉತ್ತರವನ್ನು ಬೆರಳಚ್ಚು/ಡಿಟಿಪಿ ಸ್ಟೆನ್ಸಿಲ್ ಮಾಡಿ ಪರಿಶೀಲಿಸಲು(ಅವಶ್ಯವಿದ್ದಲ್ಲಿ) | ರೂ.209–00 | ರೂ.270–00 |
| 3 | ಒಂದು ವಿಷಯದ ಪ್ರಶ್ನೆಪತ್ರಿಕೆಯ ಅಥವಾ ಮಾದರಿ ಉತ್ತರದ ಸ್ಟೆನ್ಸಿಲ್ ಪ್ರತಿಗಳನ್ನು ತೆಗೆದು ಪಿನ್ ಮಾಡಲು (ಅವಶ್ಯವಿದ್ದಲ್ಲಿ) | ರೂ.100 ಪ್ರತಿಗಳವರೆಗೂ ರೂ.77–00 100 ಪ್ರತಿ ಮೀರಿದಲ್ಲಿ ರೂ.154–00 | 100 ಪ್ರತಿಗಳವರೆಗೂ ರೂ.100.00 100 ಪ್ರತಿ ಮೀರಿದಲ್ಲಿ ರೂ.200–00 |

| **ಜಿ) ಮೌಲ್ಯಮಾಪನ ಕೇಂದ್ರಗಳ ಮೇಲ್ವಿಚಾರಕರು, ಶಿಬಿರಾಧಿಕಾರಿಗಳು ಹಾಗೂ ಸಿಬ್ಬಂದಿಗೆ ಸಂಭಾವನೆ. (ಪ್ರತಿಯೊಬ್ಬರಿಗೆ)** | | | |
|---|---|---|---|
| 1 | ಶಿಬಿರಗಳ ಮೇಲ್ವಿಚಾರಣೆ ನಡೆಸುವ ಉಪ ನಿರ್ದೇಶಕರಿಗೆ/ನಿರ್ದೇಶನಾಲಯದ ಅಧಿಕಾರಿಗಳು | ದಿನವೊಂದಕ್ಕೆ ರೂ.574–00 ರಂತೆ ಗರಿಷ್ಠ ರೂ.8036–00 ಮಿತಿಗೆ ಒಳಪಟ್ಟಿದೆ. | ದಿನವೊಂದಕ್ಕೆ ರೂ.745–00ರಂತೆ ಗರಿಷ್ಠ ರೂ.8035.00 ಮಿತಿಗೆ ಒಳಪಟ್ಟಿದೆ. |
| 2. | ಶಿಬಿರಾಧಿಕಾರಿಗಳು | ದಿನವೊಂದಕ್ಕೆ ರೂ.525–00 ರಂತೆ ಗರಿಷ್ಠ ರೂ.7350–00 ಮಿತಿಗೆ ಒಳಪಟ್ಟಿದೆ. | ದಿನವೊಂದಕ್ಕೆ ರೂ.680.00ರಂತೆ ಗರಿಷ್ಠ ರೂ.9555.00 ಮಿತಿಗೆ ಒಳಪಟ್ಟಿದೆ. |

| | | | |
|---|---|---|---|
| 3. | ಶಿಬಿರ ಸಹಾಯಕರು | ದಿನವೊಂದಕ್ಕೆ ರೂ.154-00 ರಂತೆ ಗರಿಷ್ಠ ರೂ.2072-00 ಮಿತಿಗೆ ಒಳಪಟ್ಟಿದೆ. | ದಿನವೊಂದಕ್ಕೆ ರೂ.200.00 ರಂತೆ ಗರಿಷ್ಠ ರೂ.2695.00 ಮಿತಿಗೆ ಒಳಪಟ್ಟಿದೆ. |
| 4. | ಗ್ರೂಪ್-ಡಿ ಸಿಬ್ಬಂದಿ | ದಿನವೊಂದಕ್ಕೆ ರೂ.92-00 ರಂತೆ ಗರಿಷ್ಠ ರೂ.1294-00 ಮಿತಿಗೆ ಒಳಪಟ್ಟಿದೆ. | ದಿನವೊಂದಕ್ಕೆ ರೂ.120.00 ರಂತೆ ಗರಿಷ್ಠ ರೂ.1680.00 ಮಿತಿಗೆ ಒಳಪಟ್ಟಿದೆ. |
| 5. | ರಾತ್ರಿ ಪಹರೆಗಾಗಿ (ಪ್ರತಿ ಶಿಬಿರಕ್ಕೆ ಒಬ್ಬರು) | ದಿನವೊಂದಕ್ಕೆ ರೂ.92-00 ರಂತೆ ಗರಿಷ್ಠ ರೂ.1294-00 ಮಿತಿಗೆ ಒಳಪಟ್ಟಿದೆ. | ದಿನವೊಂದಕ್ಕೆ ರೂ.120.00 ರಂತೆ ಗರಿಷ್ಠ ರೂ.1680.00 ಮಿತಿಗೆ ಒಳಪಟ್ಟಿದೆ. |
| 6. | ಸ್ವೀಪರ್ (ಕಸ ಗುಡಿಸುವವರು – ಒಬ್ಬರು) | ದಿನವೊಂದಕ್ಕೆ ರೂ.39-00 ರಂತೆ ಗರಿಷ್ಠ ರೂ.647-00 ಮಿತಿಗೆ ಒಳಪಟ್ಟಿದೆ. | ದಿನವೊಂದಕ್ಕೆ ರೂ.50.00ರಂತೆ ಗರಿಷ್ಠ ರೂ.840.00 ಮಿತಿಗೆ ಒಳಪಟ್ಟಿದೆ. |
| 7. | ಸ್ಕಾವೆಂಜರ್ (ಜಾಡಮಾಲಿ-ಒಬ್ಬರು) | ದಿನವೊಂದಕ್ಕೆ ರೂ.39-00 ರಂತೆ ಗರಿಷ್ಠ ರೂ.647-00 ಮಿತಿಗೆ ಒಳಪಟ್ಟಿದೆ. | ದಿನವೊಂದಕ್ಕೆ ರೂ.50.00ರಂತೆ ಗರಿಷ್ಠ ರೂ.840.00ಮಿತಿಗೆ ಒಳಪಟ್ಟಿದೆ. |
| 8. | ಎಲ್ಲಾ ವಿಷಯಗಳ ಬಂಡಲ್‌ಗಳಿಗೆ ಕೋಡಿಂಗ್ (ಪ್ರತಿ ಬಂಡಲ್ ಒಂದಕ್ಕೆ) | ರೂ.3.00 | ರೂ.4.00 |
| 9. | ಬಂಡಲ್‌ಗಳಿಗೆ ಡಿ-ಕೋಡಿಂಗ್ ಮಾಡಲು (ಪ್ರತಿ ಬಂಡಲ್ ಒಂದಕ್ಕೆ) | ರೂ.3.00 | ರೂ.4.00 |
| ವಿಶೇಷ ಸೂಚನೆ: | | | |
| ಮೌಲ್ಯಮಾಪಕರ ಸಂಖ್ಯೆಗನುಗುಣವಾಗಿ ಶಿಬಿರ ಸಹಾಯಕರು ಮತ್ತು ಗ್ರೂಪ್-ಡಿ ಸಿಬ್ಬಂದಿಯ ಮಿತಿ | | | |
| 1. | ಶಿಬಿರ ಸಹಾಯಕರು: ಪ್ರತಿ 100 ಮೌಲ್ಯಮಾಪಕರಿಗೆ ಒಬ್ಬರು ಹಾಗೂ ಗರಿಷ್ಠ ಐವರು(5) ಸಹಾಯಕರು | | |
| 2. | ಗ್ರೂಪ್-ಡಿ ಸಿಬ್ಬಂದಿ: 100 ಮೌಲ್ಯಮಾಪಕರಿಗೆ 3(ಮೂರು) ಸಿಬ್ಬಂದಿ, ಹೆಚ್ಚುವರಿ ಪ್ರತಿ 100 ಮೌಲ್ಯಮಾಪಕರಿಗೆ 1(ಒಂದು) ಸಿಬ್ಬಂದಿ, ಗರಿಷ್ಠ 8(ಎಂಟು) ಸಿಬ್ಬಂದಿ, ಮುಂದಿನ ಭಿನ್ನಾಂಕ 50 ಮತ್ತು ಅದಕ್ಕಿಂತ ಮೇಲ್ಪಟ್ಟಿದ್ದಲ್ಲಿ ಮತ್ತೊಬ್ಬರು. | | |

**ಸಾರಿಗೆ ಭತ್ಯೆ:**

1) ಶಿಬಿರದ ಸಹಾಯಕರು, ಗ್ರೂಪ್-ಡಿ, ಸ್ವೀಪರ್ಸ್ ಇತ್ಯಾದಿ ನೌಕರರಿಗೆ ರೂ.105/-(ಹೊಸ ದರ ಪರಿಷ್ಕರಣೆಯಾಗಬೇಕಾಗಿದೆ) ಸಾರಿಗೆ ಭತ್ಯೆಯನ್ನು ಪರೀಕ್ಷಾ ಕಾರ್ಯನಿರ್ವಹಿಸುವ ಅವಧಿಗೆ ಮಾತ್ರ ಅಥವಾ ಗರಿಷ್ಠ 20 ದಿನಗಳವರೆಗೆ ಪಾವತಿಸಬಹುದು. (ಸರ್ಕಾರದ ಆದೇಶ ಸಂಖ್ಯೆ:ಇಡಿ 40 ಟಿಪಿಯು 2013 ದಿನಾಂಕ:29-10-2014)

2) ಶಿಬಿರಾಧಿಕಾರಿ ಹಾಗೂ ಶಿಬಿರದ ಇತರೆ ಸಿಬ್ಬಂದಿಯಾದ ಸಹಾಯಕರು ಮತ್ತು ಗ್ರೂಪ್-ಡಿ ಸಿಬ್ಬಂದಿಗೆ ಮೌಲ್ಯಮಾಪನ ನಡೆಯುವ ದಿನಗಳ ಮಧ್ಯೆ ಬರುವ ಸರ್ಕಾರಿ ಸಾರ್ವತ್ರಿಕ ರಜಾ ದಿನಗಳಂದು

ಕಾರ್ಯನಿರ್ವಹಿಸಿದರೆ ಮಾತ್ರ ಅವರಿಗೆ ಆ ಸರ್ಕಾರಿ ರಜಾ ದಿನಗಳಿಗೆ ಸ್ಥಳೀಯ ಸಾರಿಗೆ ಭತ್ಯೆ ನೀಡಲಾಗುವುದು. ಉಳಿದ ದಿನಗಳಿಗೆ ಸಾರಿಗೆ ಭತ್ಯೆ ಇರುವುದಿಲ್ಲ. ವೆಕೇಷನ್ ಅವಧಿಯಲ್ಲಿ ಉಪನ್ಯಾಸಕರು ಶಿಬಿರಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದಾಗ ಸಾರಿಗೆ ಭತ್ಯೆಗೆ ಅರ್ಹರಿರುತ್ತಾರೆ.

3) ರಾತ್ರಿ ಪಹರೆಗಾರ, ಸ್ವೀಪರ್, ಸ್ಕಾವೆಂಜರ್ ಇವರಿಗೆ ಯಾವ ದಿನಗಳಿಗೂ ಸ್ಥಳೀಯ ಸಾರಿಗೆ ಭತ್ಯೆ ಇರುವುದಿಲ್ಲ.

(ಮೇಲಿನ ಕ್ರಮ ಸಂಖ್ಯೆ:1ರಲ್ಲಿನ ಅಂಶ ಸೇರ್ಪಡೆಯಾದಲ್ಲಿ ಈ ಅಂಶವನ್ನು ಕೈಬಿಡುವ ಬಗ್ಗೆ ನಿರ್ಣಯಿಸಬಹುದು.)

4) ಶಿಬಿರಾಧಿಕಾರಿಯು ಪ್ರಿನ್ಸಿಪಲ್‌ರಲ್ಲದೆ ಇತರೆ ಬೋಧಕ ಸಿಬ್ಬಂದಿಯಾಗಿದ್ದಲ್ಲಿ ಮಾತ್ರ ಮೌಲ್ಯಮಾಪನ ನಡೆಯುವ ಎಲ್ಲಾ ದಿನಗಳಿಗೂ ಸ್ಥಳೀಯ ಸಾರಿಗೆ ಭತೆಯ ನೀಡಬಹುದು.

| ಹೆಚ್) OMR ಅಂಕಪಟ್ಟಿಗಳನ್ನು ಜಿಲ್ಲಾವಾರು ವಿಂಗಡಿಸಿ ಜೋಡಿಸಿ ಸ್ಕ್ಯಾನಿಂಗ್/ಗಣಕೀಕರಣಕ್ಕೆ ನೀಡುವ ಸಿಬ್ಬಂದಿಗೆ ಸಂಭಾವನೆ(ಥಿಯರಿ ಮತ್ತು ಪ್ರಾಕ್ಟಿಕಲ್ ಪ್ರತ್ಯೇಕವಾಗಿ) | | | |
|---|---|---|---|
| 1 | ನಿರ್ದೇಶಕರು | ರೂ.2464–00 | ರೂ.3205.00 |
| 2 | ಜಂಟಿ ನಿರ್ದೇಶಕರು (ಪರೀಕ್ಷೆ) | ರೂ.2310–00 | ರೂ.3005.00 |
| 3 | ಉಪ ನಿರ್ದೇಶಕರು (ಪರೀಕ್ಷೆ) | ರೂ.2156–00 | ರೂ.2805.00 |
| 4 | ಇತರೆ ಅಧಿಕಾರಿಗಳು (ಪ್ರತಿಯೊಬ್ಬರಿಗೆ) | ರೂ.1632–00 | ರೂ.2120.00 |
| 5 | ಗ್ರೂಪ್–ಸಿ ಸಿಬ್ಬಂದಿ (ಸಹಾಯಕರು)(ಪ್ರತಿಯೊಬ್ಬರಿಗೆ) | ರೂ.1448–00 | ರೂ.1880.00 |
| 6 | ಗ್ರೂಪ್–ಡಿ ಸಿಬ್ಬಂದಿ (ಪ್ರತಿಯೊಬ್ಬರಿಗೆ) | ರೂ.671–00 | ರೂ.870.00 |

ವಿ ಸೂ :–

1) ಕೆಲಸದ ಪ್ರಮಾಣಕ್ಕೆ ಅನುಗುಣವಾಗಿ ತಕ್ಕಷ್ಟು ಸಿಬ್ಬಂದಿಯನ್ನು ನಿರ್ದೇಶಕರು ನಿಯೋಜಿಸತಕ್ಕದ್ದು.

2) ಇದು ಪೂರ್ತಿ ಕೆಲಸಕ್ಕೆ ನೀಡಲಾಗುತ್ತಿರುವ ಸಂಭಾವನೆಯಾಗಿದ್ದು, ನಿಯೋಜಿತ ಸಿಬ್ಬಂದಿಯು ಸದರಿ ಕೆಲಸ ನಡೆಯುತ್ತಿರುವ ದಿನಗಳಲ್ಲಿ ರಜೆ ತೆಗೆದುಕೊಂಡರೆ ಅಥವಾ ಗೈರುಹಾಜರಾದರೆ ಒಟ್ಟು ಸಂಭಾವನೆಯನ್ನು ಕೆಲಸದ ಅವಧಿಯ ಪೂರ್ತಿ ದಿನಗಳಿಗೆ ಲೆಕ್ಕಹಾಕಿ ಪ್ರತಿ ದಿನಕ್ಕೆ ಬರುವ ಸಂಭಾವನೆಯನ್ನು ಗೈರುಹಾಜರಾದ ದಿನಗಳಿಗೆ ಕಡಿತಗೊಳಿಸಲಾಗುವುದು.

| ಐ) ಜಾಗೃತದಳದ ಚೇರ್ಮನ್ ಹಾಗೂ ಸದಸ್ಯರಿಗೆ ಸಂಭಾವನೆ. | | | |
|---|---|---|---|
| 1 | ಚೇರ್ಮನ್ (ಒಬ್ಬರಿಗೆ) | ರೂ.1848–00 ಹಾಗೂ ದಿನವೊಂದಕ್ಕೆ ರೂ.370–00 + ಕನಾಸೇ ನಿಯಮಾನುಸಾರ ಪ್ರಯಾಣ ಭತ್ಯೆ | ರೂ.2400.00 ಹಾಗೂ ದಿನವೊಂದಕ್ಕೆ ರೂ.480.00 + ಕನಾಸೇ ನಿಯಮಾನುಸಾರ ಪ್ರಯಾಣ ಭತ್ಯೆ |

| | | | |
|---|---|---|---|
| 2 | ಸದಸ್ಯರು (ಪ್ರತಿಯೊಬ್ಬರಿಗೂ) | ರೂ.1478–00 ಹಾಗೂ ದಿನವೊಂದಕ್ಕೆ ರೂ.370–00 + ಕನಾಸೇ ನಿಯಮಾನುಸಾರ ಪ್ರಯಾಣ ಭತ್ಯೆ | ರೂ.1920.00 ಹಾಗೂ ದಿನವೊಂದಕ್ಕೆ ರೂ.480.00 + ಕನಾಸೇ ನಿಯಮಾನುಸಾರ ಪ್ರಯಾಣ ಭತ್ಯೆ |
| 3. | ವಾಹನಗಳು/ವಾಹನಗಳ ಇಂಧನ ವೆಚ್ಚ (ಒಂದು ತಂಡಕ್ಕೆ ಒಂದು ವಾಹನ)<br>ವಿ.ಸೂ.: ಈ ಸಂಭಾವನೆಯು ಒಂದು ಪೂರ್ತಿ ಪರೀಕ್ಷೆಗೆ ಅನ್ವಯಿಸುತ್ತದೆ. | ನಿರ್ದೇಶಕರು ಅಗತ್ಯಕ್ಕೆ ತಕ್ಕಂತೆ ಒದಗಿಸತಕ್ಕದ್ದು. | ನಿರ್ದೇಶಕರು ಅಗತ್ಯಕ್ಕೆ ತಕ್ಕಂತೆ ಒದಗಿಸತಕ್ಕದ್ದು. |
| 4. | ವಿಶೇಷ ಜಾಗೃತದಳದ ಸದಸ್ಯರು(SPECIAL SQUAD) | ರೂ.1478–00 ಹಾಗೂ ದಿನವೊಂದಕ್ಕೆ ರೂ.370–00 + ಕನಾಸೇ ನಿಯಮಾನುಸಾರ ಪ್ರಯಾಣ ಭತ್ಯೆ | ರೂ.1920.00 ಹಾಗೂ ದಿನವೊಂದಕ್ಕೆ ರೂ.480.00 + ಕನಾಸೇ ನಿಯಮಾನುಸಾರ ಪ್ರಯಾಣ ಭತ್ಯೆ |

**ವಿ.ಸೂ.:**

ಕ್ರಮ ಸಂಖ್ಯೆ:3ಕ್ಕೆ ವಿ.ಸೂ: ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ತಲಾ ಇಬ್ಬರಂತೆ ನೇಮಕ ಮಾಡಲಾಗುವುದು. ಪರೀಕ್ಷಾರ್ಥಿಗಳ ಸಂಖ್ಯೆ ಹೆಚ್ಚುತ್ತಿದ್ದು ಪರೀಕ್ಷಾ ಪ್ರಾವಿತ್ರ್ಯತೆಯನ್ನು ಕಾಪಾಡಲು ಮತ್ತು ಪರೀಕ್ಷಾ ಅವ್ಯವಹಾರಗಳನ್ನು ತಡೆಗಟ್ಟಲು ಪರೀಕ್ಷಾ ವೀಕ್ಷಕರುಗಳನ್ನು ನಿರ್ದೇಶಕರ ವಿವೇಚನೆ ಮೇರೆಗೆ ಇಬ್ಬರಿಗಿಂತ ಹೆಚ್ಚಿಗೆ ನೇಮಕ ಮಾಡಬಹುದಾಗಿದೆ. ಜಾಗೃತ ದಳದ ಚೇರ್ಮನ್, ಸದಸ್ಯರು, ವಿಶೇಷ ಜಾಗೃತ ದಳದ ಸದಸ್ಯರು ಹಾಗೂ ವಾಹನ ಚಾಲಕರಿಗೆ ವಾರ್ಷಿಕ ಮತ್ತು ಪೂರಕ ಪರೀಕ್ಷೆಗಳಿಗೆ ಮೇಲ್ಕಂಡ ಸಂಭಾವನೆ ದರಗಳು ಪ್ರತ್ಯೇಕವಾಗಿ ಪೂರ್ಣ ಪರೀಕ್ಷಾ ಅವಧಿಗೆ ಅನ್ವಯಿಸುತ್ತದೆ. ಮೌಲ್ಯಮಾಪಕರಿಗೆ ನೀಡುವಂತೆ ದಿನಭತ್ಯೆ ನೀಡಲಾಗುವುದು ಹಾಗೂ ಕೆ.ಸಿ.ಎಸ್.ಆರ್ ಪ್ರಕಾರ ಸಾರಿಗೆ ಭತ್ಯೆ.

| | | | |
|---|---|---|---|
| **ಜೆ) ಮೌಲ್ಯಮಾಪಕರಿಗೆ ಪ್ರಯಾಣ ಭತ್ಯೆ ಹಾಗೂ ಸಂಭಾವನೆಯ ಚೆಕ್‌ಗಳನ್ನು ನೀಡುವ ಕಾರ್ಯ ನಿರ್ವಹಿಸುವ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸಂಭಾವನೆ.** | | | |
| 1 | ಮೌಲ್ಯಮಾಪಕರಿಗೆ ಪ್ರಯಾಣ ಭತ್ಯೆ ಹಾಗೂ ಸಂಭಾವನೆಯ ಚೆಕ್‌ಗಳನ್ನು ನೀಡಲು ನಿಯೋಜಿತವಾದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ | ರೂ.32–00 ಪ್ರತಿ ಸಂಭಾವನೆ ಮತ್ತು ಪ್ರಯಾಣಭತ್ಯೆ ಬಿಲ್ಲಿಗೆ | ರೂ.40.00 ಪ್ರತಿ ಸಂಭಾವನೆ ಮತ್ತು ಪ್ರಯಾಣಭತ್ಯೆ ಬಿಲ್ಲಿಗೆ |

ವಿ.ಸೂ.:ಕೆಲಸದ ಪ್ರಮಾಣವನ್ನು ಅರಿತು, ನಿರ್ದೇಶಕರು ಸಿಬ್ಬಂದಿಯ ಸಂಖ್ಯೆಯನ್ನು ನಿಗದಿಗೊಳಿಸತಕ್ಕದ್ದು. ಪ್ರತ್ಯೇಕ ಸಾರಿಗೆ ಭತ್ಯೆ ಇರುವುದಿಲ್ಲ.

| ಕೆ) ಚೆಕ್‌ಲಿಸ್ಟ್ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಸಂಭಾವನೆ (ಅಭ್ಯರ್ಥಿಗಳ ಅರ್ಜಿಗಳ ಚೆಕ್‌ಲಿಸ್ಟ್, ಮೌಲ್ಯಮಾಪಕರ ಚೆಕ್‌ಲಿಸ್ಟ್, ಫಲಿತಾಂಶದ ಚೆಕ್‌ಲಿಸ್ಟ್ ಹಾಗೂ ಇತರೆ ಕಾರ್ಯಗಳು)ಒಂದು ಪರೀಕ್ಷೆಗೆ ಒಮ್ಮೆ ಮಾತ್ರ ಪ್ರಿ ಮತ್ತು ಪೋಸ್ಟ್ ಸೇರಿ(ಪ್ರತಿಯೊಬ್ಬರಿಗೆ) | | | |
|---|---|---|---|
| 1 | ಸಹಾಯಕ ನಿರ್ದೇಶಕರು/ಇತರೆ ಅಧಿಕಾರಿಗಳು | ರೂ.2618–00 | ರೂ.3405.00 |
| 2 | ಶಾಖಾಧಿಕಾರಿಗಳು/ಇತರೆ ಅಧಿಕಾರಿಗಳು | ರೂ.2464–00 | ರೂ.3205.00 |
| 3. | ಅಧೀಕ್ಷಕರು | ರೂ.2310–00 | ರೂ.3005.00 |
| 4. | ವಿಷಯ ನಿರ್ವಾಹಕರು/ಸಹಾಯಕರು | ರೂ.2156–00 | ರೂ.2805.00 |
| 5. | ಗ್ರೂಪ್–ಡಿ ಸಿಬ್ಬಂದಿ | ರೂ.1078–00 | ರೂ.1400.00 |

ವಿ.ಸೂ.:

1) ಈ ಸಂಭಾವನೆಯನ್ನು ನಿರ್ದೇಶಕರು ಸೂಚಿಸುವ ಅವಧಿಯಲ್ಲಿ (ಸರ್ಕಾರಿ ರಜಾ ದಿನಗಳಾದರೂ ಸಹಿತ) ಕಾರ್ಯವನ್ನು ಪೂರೈಸಿದರೆ ಮಾತ್ರ ನೀಡಲಾಗುವುದು.

2) ಯಾವುದೇ ಕೆಲಸವನ್ನು ನಿರ್ವಹಿಸಬೇಕಾದ ವ್ಯಕ್ತಿಯು ಗೈರು ಹಾಜರಿಯಿಂದ ಅಥವಾ ಇನ್ನಾವುದೇ ಕಾರಣದಿಂದ ನಿರ್ವಹಿಸದೆ ಹೋದಾಗ, ಬೋರೊಬ್ಬರಿಂದ ಮಾಡಿಸಿ, ಅವರಿಗೆ ಆ ಸಿಬ್ಬಂದಿಯ ಸಂಭಾವನೆಯಿಂದ ಮುರಿದು ನೀಡುವುದು.

3) ಈ ಸಂಭಾವನೆಯು ಹೊಸ ಅಭ್ಯರ್ಥಿಗಳ/ಪುನರಾವರ್ತಿತ ಅಭ್ಯರ್ಥಿಗಳ ಅರ್ಜಿಗಳ ಚೆಕ್‌ಲಿಸ್ಟ್–ಮೌಲ್ಯಮಾಪಕರ ವಿವರಗಳ ಚೆಕ್‌ಲಿಸ್ಟ್ – ಪ್ರವೇಶ ಪ್ರತಿಗಳನ್ನು ಫಲಿತಾಂಶ ಪಟ್ಟಿಯನ್ನು/ಅಂಕಪಟ್ಟಿಗಳನ್ನು/ಪ್ರಮಾಣ ಪತ್ರಗಳನ್ನು ಬಟವಾಡೆಗೆ ಸಿದ್ಧಪಡಿಸುವ, ಫಲಿತಾಂಶದ ಮ್ಯಾಚಿಂಗ್ ಎರರ್ ಚೆಕ್‌ಲಿಸ್ಟ್ ಕಾರ್ಯಗಳಿಗೆ ಅನ್ವಯಿಸುತ್ತದೆ..

4) ಈ ಕಾರ್ಯಗಳಿಗೆ ಪ್ರತ್ಯೇಕ ಸಾರಿಗೆ ಭತ್ಯೆ ಇರುವುದಿಲ್ಲ.

| ಎಲ್) ವಿಶೇಷ ಪ್ರಶ್ನೆಪತ್ರಿಕಾ ಪಾಲಕರಿಗೆ ಸಂಭಾವನೆ (ಜಿಲ್ಲಾ ಉಪ ನಿರ್ದೇಶಕರು, ತಹಶೀಲ್ದಾರ್, ಬಿ.ಇ.ಓ/ಶಿಕ್ಷಣ ಸಂಯೋಜಕರು/ಪ್ರಾಂಶುಪಾಲರು ಹಾಗೂ ಇತರೆ ಸಿಬ್ಬಂದಿಗೆ) ಪ್ರತಿಯೊಬ್ಬರಿಗೆ. | | | |
|---|---|---|---|
| 1 | ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ/ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದಶಕರು(ಪರೀಕ್ಷಾ ಕೆಲಸಗಳ ಮೇಲ್ವಿಚಾರಣೆಗಾಗಿ) | ರೂ.1848–00 | ರೂ.2400.00 |
| 2. | ಕ್ಷೇತ್ರಶಿಕ್ಷಣಾಧಿಕಾರಿಗಳು/ಶಿಕ್ಷಣ ಸಂಯೋಜಕರು/ವಿಷಯ ಪರಿವೀಕ್ಷಕರು | ರೂ.1463–00 | ರೂ.1900.00 |
| 3. | ತಹಶೀಲ್ದಾರರು/ಉಪತಹಶೀಲ್ದಾರರು | ರೂ.1463–00 | ರೂ.1900.00 |
| 4. | ಪ್ರಾಂಶುಪಾಲರು/ಉಪನ್ಯಾಸಕರು | ರೂ.1463–00 | ರೂ.1900.00 |
| 5. | ಸಹಾಯಕರು (ಒಬ್ಬರು) | ರೂ.1078–00 | ರೂ.1400.00 |
| 6. | ವಾಹನ ಚಾಲಕರು (ಒಂದು ಟ್ರಜರಿಗೆ ಒಬ್ಬರು) (ಶಿಕ್ಷಣ ಅಥವಾ ರೆವಿನ್ಯೂ ಇಲಾಖೆಯವರು) | ರೂ.893–00 | ರೂ.1160.00 |
| 7. | ಗ್ರೂಪ್–ಡಿ (ಶಿಕ್ಷಣ ಅಥವಾ ರೆವಿನ್ಯೂ ಇಲಾಖೆಯವರು) | ರೂ.671–00 | ರೂ.870.00 |
| 8. | ಸಹಾಯಕರು (ಒಬ್ಬರು)(ಜಿಲ್ಲಾ ಉಪ ನಿರ್ದೇಶಕರ ಕಚೇರಿಯವರು ಉಪ ನಿರ್ದೇಶಕರಿಗೆ ಸಹಾಯ ಸಲ್ಲಿಸಲು) | ರೂ.1078–00 | ರೂ.1400.00 |
| 9. | ವಾಹನ ಚಾಲಕರು(ಒಬ್ಬರು) – ಜಿಲ್ಲಾ ಉಪ ನಿರ್ದೇಶಕರ ವಾಹನ ಚಾಲಕರು | ರೂ.893–00 | ರೂ.1160.00 |
| 10 | ಪ್ರಶ್ನೆಪತ್ರಿಕೆಗಳ ಸಾಗಾಣಿಕಾ ವೆಚ್ಚ (ಸಾದಿಲ್ವಾರು ವೆಚ್ಚ) | ನಿರ್ದೇಶಕರ ವಿವೇಚನೆಯ ಮೇರೆಗೆ | |

ವಿ.ಸೂ.: ಈ ಸಂಭಾವನೆಯು ಪ್ರಶ್ನೆಪತ್ರಿಕೆಗಳನ್ನು ಮಾರ್ಗಾಧಿಕಾರಿಗಳಿಂದ ಸ್ವೀಕರಿಸಿ, ಖಜಾನೆಯಲ್ಲಿ ಠೇವಣಿಸುವ, ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ವಿತರಿಸುವ ಹಾಗೂ ಪರೀಕ್ಷಾ ಕೆಲಸದ ಪೂರ್ತಿ ಉಸ್ತುವಾರಿ ಕೆಲಸ ಸೇರಿ (ಕ್ರಮ ಸಂಖ್ಯೆ:1, 2, 3ರ ಅಧಿಕಾರಿಗಳು ಪ್ರಯಾಣಭತ್ಯೆ ಪಡೆಯಲು ಅರ್ಹರಾಗುವುದಿಲ್ಲ). ಪ್ರತಿದಿನ ಪ್ರಶ್ನೆಪತ್ರಿಕೆಗಳನ್ನು

ಪೂರೈಸಲು ಹೆಚ್ಚುವರಿ ಮಾರ್ಗಾಧಿಕಾರಿಗಳನ್ನು ನೇಮಕ ಮಾಡಿಕೊಂಡಲ್ಲಿ ಸಂಬಂಧಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಂದ ಪಡೆದ ಅನುಮೋದನಾ ಪತ್ರವನ್ನು ಬಿಲ್ಲಿಗೆ ಲಗತ್ತಿಸಬೇಕು.

| ಎಂ) ಖಜಾನಾಧಿಕಾರಿಗಳು ಮತ್ತು ಸಿಬ್ಬಂದಿಯವರಿಗೆ ಪ್ರಶ್ನೆಪತ್ರಿಕೆಗಳನ್ನು ಶೇಖರಣೆಸಿಕೊಂಡು ಪರೀಕ್ಷಾ ದಿನಗಳಂದು ನೀಡುವ ಕಾರ್ಯಕ್ಕೆ ಸಂಭಾವನೆ (ಪ್ರತಿ ಟ್ರೆಜರಿಗೆ). | | | |
|---|---|---|---|
| 1 | ಖಜಾನಾಧಿಕಾರಿ (ಒಬ್ಬರು) | ರೂ.1463–00 | ರೂ.1900.00 |
| 2 | ಖಜಾನೆ ಸಹಾಯಕರು (ಇಬ್ಬರು) | ರೂ.1078–00 | ರೂ.1400.00 |
| 3 | ಖಜಾನೆಯ ಗ್ರೂಪ್–ಡಿ ಸಿಬ್ಬಂದಿ (ಒಬ್ಬರು) | ರೂ.893–00 | ರೂ.1160.00 |

ವಿ ಸೂ : ಈ ಸಂಭಾವನೆಯು ಪ್ರಶ್ನೆಪತ್ರಿಕೆಗಳನ್ನು ಖಜಾನೆಯಲ್ಲಿ ಶೇಖರಣೆಸುವ, ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ವಿತರಿಸಲು ನೀಡುವ ಹಾಗೂ ಇತರೆ ಎಲ್ಲಾ ಪರೀಕ್ಷಾ ಕೆಲಸಗಳಿಗೂ ಅನ್ವಯಿಸುತ್ತದೆ. (ಪ್ರತ್ಯೇಕ ಸಾರಿಗೆ ಭತ್ಯೆ ಇರುವುದಿಲ್ಲ) ಈ ಸಂಭಾವನೆಯು ಪೂರ್ತಿ ಪರೀಕ್ಷೆಗೆ ಅನ್ವಯಿಸುತ್ತದೆ.

| ಎನ್) ಅಂಕಗಳ ಮರುಎಣಿಕೆ ಕಾರ್ಯಕ್ಕೆ ಸಂಭಾವನೆ. | | | |
|---|---|---|---|
| 1 | ಅಂಕಗಳ ಮರುಎಣಿಕೆ (ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸೇರಿ) | ರೂ.35–00<br>ಪ್ರತಿ ಉತ್ತರ ಪತ್ರಿಕೆ ಒಂದಕ್ಕೆ ಈ ಹಣವನ್ನು ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಅವರವರು ನಿರ್ವಹಿಸಿದ ಕೆಲಸ ಹಾಗೂ ಪ್ರಮಾಣವನ್ನು ಆಧರಿಸಿ ನಿರ್ದೇಶಕರ ವಿವೇಚನೆ ಮೇರೆಗೆ ಶೇಕಡಾವಾರು ಲೆಕ್ಕದಲ್ಲಿ ಹಂಚಿಕೆ ಮಾಡತಕ್ಕದ್ದು. | ರೂ.45.00<br>ಪ್ರತಿ ಉತ್ತರ ಪತ್ರಿಕೆ ಒಂದಕ್ಕೆ ಈ ಹಣವನ್ನು ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಅವರವರು ನಿರ್ವಹಿಸಿದ ಕೆಲಸ ಹಾಗೂ ಪ್ರಮಾಣವನ್ನು ಆಧರಿಸಿ ನಿರ್ದೇಶಕರ ವಿವೇಚನೆ ಮೇರೆಗೆ ಶೇಕಡಾವಾರುಲೆಕ್ಕದಲ್ಲಿ ಹಂಚಿಕೆ ಮಾಡತಕ್ಕದ್ದು. |

ವಿ ಸೂ :
ಕೆಲಸದ ಪ್ರಮಾಣಕ್ಕೆ ತಕ್ಕಷ್ಟು ಸಿಬ್ಬಂದಿಯನ್ನು ನಿರ್ದೇಶಕರು ನಿಯೋಜಿಸಬಹುದು. ಪ್ರತ್ಯೇಕ ಸಾರಿಗೆ ಭತ್ಯೆ ಇರುವುದಿಲ್ಲ.

| ಪಿ) ಗಣಕ ಕೇಂದ್ರದ ಸಿಬ್ಬಂದಿಗೆ ಹಾಗು ಅರ್ಜಿಗಳನ್ನು, ಅಂಕಪಟ್ಟಿಗಳನ್ನು ಮತ್ತು ಇತರೆ ಮಾಹಿತಿಯನ್ನು ಗಣಕೀಕರಿಸಲು (ಕೀಯಿಂಗ್) ಸಂಭಾವನೆ. | | | |
|---|---|---|---|
| ಅ) ಮಾಹಿತಿಗಳನ್ನು ಕೀ ಮಾಡಲು ಸಂಭಾವನೆ (ಪ್ರತಿ ಅರ್ಜಿಗೆ / ರೆಕಾರ್ಡ್‌ಗೆ). | | | |
| 1 | ಹೊಸ ಅಭ್ಯರ್ಥಿಗಳ ಅರ್ಜಿಗಳನ್ನು ಗಣಕೀಕರಿಸಲು /ಪ್ರಥಮ ಪಿಯುಸಿ ದಾಖಲಾತಿ ಮಾಹಿತಿ ಗಣಕೀಕರಿಸಲು | ರೂ.0–56 | ರೂ.0.70 |
| 2 | ಪುನರಾವರ್ತಿತ ಅಭ್ಯರ್ಥಿಗಳ ಅರ್ಜಿಗಳನ್ನು ಗಣಕೀಕರಿಸಲು | ರೂ.0–49 | ರೂ.0.65 |
| 3 | ಅಂಕಪಟ್ಟಿಗಳನ್ನು ಗಣಕೀಕರಿಸಲು | ರೂ.0–49 | ರೂ.0.65 |
| 4 | ಇತರೆ ಮಾಹಿತಿಗಳನ್ನು ಗಣಕೀಕರಿಸಲು | ರೂ.0–49 | ರೂ.0.65 |
| ಆ) ಗಣಕ ಕೇಂದ್ರದ ಸಿಬ್ಬಂದಿಗೆ ಸಂಭಾವನೆ (ಒಂದು ಪರೀಕ್ಷೆಗೆ ಒಮ್ಮೆ ಮಾತ್ರ – ಪ್ರೀ ಮತ್ತು ಪೋಸ್ಟ್ ಎಕ್ಸಾಮಿನೇಷನ್ ಕೆಲಸ ಸೇರಿ) | | | |
| 1 | ಪ್ರೋಗ್ರಾಮರ್ಸ್(2) | ರೂ.4312–00 | ರೂ.5605.00 |
| 2 | ಕನ್ಸೋಲ್ ಆಪರೇಟರ್/ತರಬೇತಿ ಹೊಂದಿದ ಪ್ರಥಮ ದರ್ಜೆ ಸಹಾಯಕರು | ರೂ.3080–00 | ರೂ.4005.00 |

| | | | |
|---|---|---|---|
| 3 | ಗ್ರೂಪ್–ಡಿ ಸಿಬ್ಬಂದಿ | ರೂ.1232–00 | ರೂ.1600.00 |
| 4 | ಪಾಳಿಗಳಲ್ಲಿ ಕೆಲಸ ನಿರ್ವಹಿಸಿದ ನಿಗದಿತ ದಿನಗಳಂದು ಕ್ರಮ ಸಂಖ್ಯೆ 1, 2 ಹಾಗೂ 3ರ ಸಿಬ್ಬಂದಿಗೆ ಸಾರಿಗೆ ಭತ್ಯೆ (ಇಲಾಖೆಯಿಂದ ವಾಹನ ಒದಗಿಸದಿದ್ದಲ್ಲಿ ಮಾತ್ರ) | ರೂ.92–00 | ರೂ.200.00 |

**ಕ್ಯೂ) ಸ್ಥಳೀಯ ಸಾರಿಗೆ ಭತ್ಯೆ**

ಈ ಪಟ್ಟಿಯಲ್ಲಿರುವ ಯಾವುದೇ ಪರೀಕ್ಷಾ ಕಾರ್ಯಕ್ಕೆ ನಿಯೋಜಿತವಾಗಿರುವ ಸಿಬ್ಬಂದಿಯು ತಾನು ಕೆಲಸ ನಿರ್ವಹಿಸುತ್ತಿರುವ ಕಾಲೇಜು / ಕಛೇರಿಯಿಂದ ಅದೇ ಊರಿನ / ನಗರದ ಸುಮಾರು 3 ಕಿ.ಮೀ.ಗಳಿಗಿಂತಲೂ ದೂರದ ಬೇರೊಂದು ಸ್ಥಳದಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸಬೇಕಾದಲ್ಲಿ – ಕಛೇರಿಯಿಂದ ತೆರಳಿ ಪುನಃ ಕಛೇರಿಗೆ ಹಿಂತಿರುಗುವ ಪ್ರಸಂಗಗಳಲ್ಲಿ ಮಾತ್ರ ಹಾಗೂ ಸರ್ಕಾರಿ ವಾಹನ ಸೌಲಭ್ಯ ಒದಗಿಸದಿರುವ ಸಂದರ್ಭಗಳಲ್ಲಿ ಆ ಕಾರ್ಯಕ್ಕೆ ನಿಗದಿಪಡಿಸಿದ ಸಂಭಾವನೆ ಜೊತೆಗೆ ಸ್ಥಳೀಯ ಸಾರಿಗೆ ಭತ್ಯೆಯನ್ನು ಪಡೆಯಬಹುದು. ಇಂತಹ ಸಂದರ್ಭಗಳಲ್ಲಿಯೂ ಅಗತ್ಯತೆಗನುಗುಣವಾಗಿ ಸಾರಿಗೆ ಭತ್ಯೆಯನ್ನು ನೀಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಿರ್ದೇಶಕರು ಹೊಂದಿರುತ್ತಾರೆ.

| | | | |
|---|---|---|---|
| 1 | ಬೆಂಗಳೂರು ನಗರದಲ್ಲಿ | ರೂ.154–00 | ರೂ.200.00 |
| 2 | ಉಳಿದ ಸ್ಥಳಗಳಲ್ಲಿ | ರೂ.105–00 | ರೂ.135.00 |

**ಆರ್) ದ್ವಿತೀಯ ಪದವಿ ಪೂರ್ವ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡುವ ಮೌಲ್ಯಮಾಪಕರಿಗೆ ಸಂಭಾವನೆ.**

| | | | |
|---|---|---|---|
| 1 | ಮುಖ್ಯ ಪರೀಕ್ಷಕರು (ದಿನವೊಂದಕ್ಕೆ) ಮೌಲ್ಯಮಾಪನ ಮುಗಿಯುವವರೆಗೆ ಅಥವಾ ಗರಿಷ್ಟ 20 ದಿನಗಳವರೆಗೆ | ರೂ.560–00 | ರೂ.730.00 |
| 2 | ಉಪಮುಖ್ಯ ಪರೀಕ್ಷಕರು / ಕಛೇರಿ ಉಪಮುಖ್ಯ ಪರೀಕ್ಷಕರು (ದಿನವೊಂದಕ್ಕೆ ಗರಿಷ್ಟ 20 ದಿನಗಳು ಅಥವಾ ಮೌಲ್ಯಮಾಪನ ಮುಗಿಯುವವರೆಗೆ ಹಾಗೂ ಗರಿಷ್ಠ 36 ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿದ ಸಂಭಾವನೆ ಹಣ) | ರೂ.525–00 | ರೂ.680.00 |
| 3 | ಸಹಾಯಕ ಮೌಲ್ಯಮಾಪಕರ ಮೂರು ಗಂಟೆ ಅವಧಿಯ ಉತ್ತರ ಪತ್ರಿಕೆಯ ಮೌಲ್ಯಮಾಪನಕ್ಕೆ. | ರೂ.21–00<br>(ಪ್ರತಿ ಉತ್ತರ ಪತ್ರಿಕೆಗೆ) | ರೂ.25.00 |
| 4 | ಬೆಂಗಳೂರು ನಗರ ಹಾಗೂ ಇತರೆ ಸ್ಥಳಗಳಲ್ಲಿ ಶಿಬಿರಾಧಿಕಾರಿಗಳಿಗೆ, ಶಿಬಿರಮೇಲ್ವಿಚಾರಕರು ಮತ್ತು ಮೌಲ್ಯಮಾಪಕರಿಗೆ ದಿನ ಭತ್ಯೆ. | ರೂ.525–00 | ರೂ.680.00 |
| 5 | ಸ್ಥಳೀಯ ಮೌಲ್ಯಮಾಪಕರಿಗೆ ದಿನವೊಂದಕ್ಕೆ ಸ್ಥಳೀಯ ಸಾರಿಗೆ ಭತ್ಯೆ:<br>1) ಬೆಂಗಳೂರು ನಗರ.<br>2) ಇತರೆ ಸ್ಥಳಗಳಲ್ಲಿ. | ರೂ.154–00<br>ರೂ.105–00 | ರೂ.200.00<br>ರೂ.135.00 |

**ವಿ ಸೂ :**

1) ಮುಖ್ಯಪರೀಕ್ಷಕರಿಗೆ ಹಾಗೂ ಉಪಮುಖ್ಯ ಪರೀಕ್ಷಕರಿಗೆ ನೀಡಲಾಗಿರುವ ಸಂಭಾವನೆಯು ಮೌಲ್ಯಮಾಪನ ಪ್ರಾರಂಭದ ಮುನ್ನಾ ಎರಡು ದಿನಗಳು ಹಾಗೂ ಮೌಲ್ಯಮಾಪನ ಮುಗಿದ ನಂತರದ ಎರಡು ದಿನಗಳಿಗೂ ಸೇರಿ ಅನ್ವಯಿಸುತ್ತದೆ.
2) ಮುಖ್ಯ ಪರೀಕ್ಷಕರ ಒಟ್ಟು ಕೆಲಸದ ದಿನಗಳು ಉಪಮುಖ್ಯ ಪರೀಕ್ಷಕರ ಕೆಲಸದ ದಿನಗಳಷ್ಟೆ ಇರುವುದು. ಮುಖ್ಯ ಪರೀಕ್ಷಕರಿಗೆ ಉತ್ತರ ಪತ್ರಿಕೆಗಳ ರಿವ್ಯೂ ಅಥವಾ ಮೌಲ್ಯಮಾಪನಕ್ಕೆ ಸಂಭಾವನೆ ಇರುವುದಿಲ್ಲ.
3) 500 ಕ್ಕಿಂತ (ಐದು ನೂರು) ಕಡಿಮೆ ಉತ್ತರ ಪತ್ರಿಕೆಗಳಿರುವ ವಿಷಯಗಳಿಗೆ ಸಾಮಾನ್ಯವಾಗಿ ಪೇಪರ್ ಸೆಟ್ಟರ್‌ಗಳನ್ನೇ

ಮೌಲ್ಯಮಾಪಕರನ್ನಾಗಿ ನೇಮಿಸಲಾಗುತ್ತಿರುವುದರಿಂದ, ಉತ್ತರ ಪತ್ರಿಕೆಗಳು ಎಷ್ಟೇ ಇರಲಿ, ಅವುಗಳನ್ನು ಪರಿಗಣಿಸದೆ ಅವರಿಗೆ ಉಪಮುಖ್ಯ ಪರೀಕ್ಷಕರ ಸಂಭಾವನೆಯನ್ನು ದಿನಲೆಕ್ಕದಲ್ಲಿ ನೀಡಲಾಗುವುದು.

4) ಮುಖ್ಯ ಪರೀಕ್ಷಕರು ಹಾಗು ಉಪಮುಖ್ಯ ಪರೀಕ್ಷಕರು ಮೌಲ್ಯಮಾಪನ ಪ್ರಾರಂಭದ ಎರಡು ದಿನಗಳ ಮೊದಲೇ (ನೇಮಕಾತಿಯಲ್ಲಿ ನಮೂದಿಸಿದ ದಿನಾಂಕದಂದು) ಕರ್ತವ್ಯಕ್ಕೆ ಹಾಜರಾಗಿ ಉತ್ತರ ಪತ್ರಿಕೆಗಳ ಚೀಲಗಳಿಂದ ಉತ್ತರ ಪತ್ರಿಕೆ ಲಕೋಟೆಗಳನ್ನು ಹೊರತೆಗೆದು ಅವುಗಳಿಗೆ ಸಂಕೇತ ಸಂಖ್ಯೆಗಳನ್ನು ನೀಡಿ ಅವುಗಳ ಲೆಕ್ಕವಿಡುವುದು ಹಾಗೂ ಮೌಲ್ಯಮಾಪನಕ್ಕೆ ಬೇಕಾಗಿರುವ ಇತರೆ ಅವಶ್ಯಕ ಸಿದ್ದತೆಗಳನ್ನು ಮಾಡಿಕೊಳ್ಳುವುದು.

5) ಇದರಲ್ಲಿ ಮಂಜೂರು ಮಾಡಿರುವ ದಿನಭತ್ಯೆ ಕೇವಲ ದ್ವಿತೀಯ ಪದವಿ ಪೂರ್ವ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕೆಲಸಕ್ಕೆ ಬರುವವರಿಗೆ ಮಾತ್ರ ಅನ್ವಯಿಸುತ್ತದೆಯೇ ಹೊರತು, ಬೇರೆ ಸಮಯದಲ್ಲಿ ಉತ್ತರ ಪತ್ರಿಕೆಗಳ ಪರಿಶೀಲನೆಗೆ ಅಥವಾ ಇತರೆ ಕೆಲಸಕ್ಕೆ ಬರುವವರಿಗೆ ಅನ್ವಯಿಸುವುದಿಲ್ಲ.

| | | | |
|---|---|---|---|
| **ಎಸ್) ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಕೇಂದ್ರಗಳಿಂದ ಗೋದಾಮಿಗೆ ಸಾಗಿಸಲು ಹಾಗೂ ಗೋದಾಮಿನಲ್ಲಿ ಉತ್ತರ ಪತ್ರಿಕೆ ಚೀಲಗಳನ್ನು ವಿಷಯವಾರು ಹಾಗೂ ಕೇಂದ್ರ ಸಂಖ್ಯೆ ಆಧಾರದ ಕ್ರಮದಲ್ಲಿ ಜೋಡಿಸಲು ಸಂಭಾವನೆ.** | | | |
| 1 | 1) ಅಧಿಕಾರಿ(1)- ಪ್ರತಿಯೊಬ್ಬರಿಗೆ | ರೂ.671-00 | ರೂ.870.00 |
| | 2)ಸಹಾಯಕರು(2)- ಪ್ರತಿಯೊಬ್ಬರಿಗೆ | ರೂ.447-00 | ರೂ.580.00 |
| | 3) ಗ್ರೂಪ್-ಡಿ(1)- ಪ್ರತಿಯೊಬ್ಬರಿಗೆ | ರೂ.224-00 | ರೂ.290.00 |
| 2 | ಉತ್ತರ ಪತ್ರಿಕೆ ಚೀಲಗಳನ್ನು ವಿಷಯವಾರು ಹಾಗೂ ಪರೀಕ್ಷಾ ಕೇಂದ್ರ ಸಂಖ್ಯೆ ಆಧಾರವಾಗಿ ಜೋಡಿಸಲು ಸಂಭಾವನೆ - ಪ್ರತಿ ಉತ್ತರ ಪತ್ರಿಕೆ ಚೀಲ ಒಂದಕ್ಕೆ (ಈ ಹಣವನ್ನು ಉತ್ತರ ಪತ್ರಿಕೆ ಚೀಲಗಳನ್ನು ಜೋಡಿಸುವ ಸಿಬ್ಬಂದಿಗೆ ಅವರು ನಿರ್ವಹಿಸಿದ ಕೆಲಸವನ್ನು ಪರಿಗಣಿಸಿ ನಿರ್ದೇಶಕರು ಮರುಹಂಚಿಕೆ ಮಾಡತಕ್ಕದ್ದು) | ರೂ.3-00 | ರೂ.4.00 |

**ವಿ.ಸೂ :** 1) ಮೌಲ್ಯಮಾಪನ ಶಿಬಿರಗಳ ಸಂಖ್ಯೆ ಹಾಗೂ ಉತ್ತರ ಪತ್ರಿಕೆ ಚೀಲಗಳ ಸಂಖ್ಯೆಯನ್ನು ಗಮನಿಸಿ ನಿರ್ದೇಶಕರು ಸಿಬ್ಬಂದಿಯ ತಂಡಗಳನ್ನು / ಸಂಖ್ಯೆಯನ್ನು ನಿಗದಿಗೊಳಿಸುವರು

2) ಕ್ರಮ ಸಂಖ್ಯೆ 1ಕ್ಕೆ ಮಾರ್ಗಾವಾರು ಸಂಭಾವನೆ ಪ್ರತ್ಯೇಕವಾಗಿ ಅನ್ವಯಿಸುತ್ತದೆ.

| | | | |
|---|---|---|---|
| **ಟಿ) ಚಾಲ್ತಿಶಾಖೆಯಲ್ಲಿ (ಸ್ವೀಕೃತಿ ಮತ್ತು ರವಾನೆ) ಚೆಕ್‌ಲಿಸ್ಟ್, ಪ್ರವೇಶ ಪತ್ರಗಳು / ಅಭ್ಯರ್ಥಿ ಪಟ್ಟಿ, ಫಲಿತಾಂಶ ಪಟ್ಟಿ, ಅಂಕಪಟ್ಟಿ / ಪ್ರಮಾಣ ಪತ್ರಗಳನ್ನು ಹಾಗೂ ಇತರೆ ಲಕೋಟೆಗಳನ್ನು / ಪಾರ್ಸಲ್‌ಗಳನ್ನು ತುರ್ತಾಗಿ ರವಾನಿಸಬೇಕಾಗಿರುವ ಕೆಲಸಗಳನ್ನು ನಿರ್ವಹಿಸಲು ಚಾಲ್ತಿಶಾಖೆಯ ಸಿಬ್ಬಂದಿಗೆ ಸಂಭಾವನೆ (ಪ್ರತಿ ಪರೀಕ್ಷೆಗೆ ಪ್ರಿ ಮತ್ತು ಪೋಸ್ಟ್ ಸೇರಿ - ಪ್ರತಿಯೊಬ್ಬರಿಗೆ).** | | | |
| 1 | ಅಧೀಕ್ಷಕರು | ರೂ.1848-00 | ರೂ.2400.00 |
| 2 | ಸಹಾಯಕರು | ರೂ.1694-00 | ರೂ.2200.00 |
| 3 | ವಾಹನ ಚಾಲಕರು | ರೂ.1232-00 | ರೂ.1600.00 |
| 4 | ಗ್ರೂಪ್-ಡಿ ಸಿಬ್ಬಂದಿ | ರೂ.1078-00 | ರೂ.1400.00 |

**ವಿ ಸೂ :**

1) ಕೆಲಸದ ಪ್ರಮಾಣ, ತೀವ್ರತೆ ಹಾಗೂ ಕೆಲಸವನ್ನು ಮುಗಿಸಬೇಕಾಗಿರುವ ಅವಧಿಯನ್ನು ಪರಿಗಣಿಸಿ, ಅಗತ್ಯಕ್ಕೆ ತಕ್ಕಷ್ಟು ಸಿಬ್ಬಂದಿಯನ್ನು ನಿರ್ದೇಶಕರು ನಿಯೋಜಿಸುವರು.

2) ಈ ಸಂಭಾವನೆಯನ್ನು ನಿರ್ದೇಶಕರು ಸೂಚಿಸಿರುವ ಅವಧಿಯಲ್ಲಿ (ಸರ್ಕಾರಿ ರಜಾ ದಿನಗಳಾದರೂ ಸಹಿತ) ಕಾರ್ಯವನ್ನು ಪೂರೈಸಿದರೆ ಮಾತ್ರ ನೀಡಲಾಗುವುದು.

3) ಯಾವುದೇ ಕೆಲಸವನ್ನು ನಿರ್ವಹಿಸಬೇಕಾದ ವ್ಯಕ್ತಿಯು ಗೈರುಹಾಜರಿಯಿಂದ ಅಥವಾ ಇನ್ನಾವುದೇ ಕಾರಣದಿಂದ

ನಿರ್ವಹಿಸದೆ ಹೋದಾಗ ಆ ಕೆಲಸವನ್ನು ಬೇರೊಬ್ಬರಿಂದ ಮಾಡಿಸಿ ಅವರಿಗೆ ಆ ಸಿಬ್ಬಂದಿಯ ಸಂಭಾವನೆಯಿಂದ ಕಡಿತಗೊಳಿಸಿ ನೀಡುವುದು.

| | | | |
|---|---|---|---|
| **ಯು) ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳ ಫೋಟೋ ಪ್ರತಿ ನೀಡುವ ಹಾಗೂ ಮರುಮೌಲ್ಯಮಾಪನ ಮಾಡುವ ವಿವಿಧ ಕಾರ್ಯಗಳನ್ನು ನಿರ್ವಹಿಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸಂಭಾವನೆ.** | | | |
| 1 | ಮರುಮೌಲ್ಯಮಾಪಕರಿಗೆ ಸಂಭಾವನೆ, 3 ಗಂಟೆ ಅವಧಿಯ ಒಂದು ಉತ್ತರ ಪತ್ರಿಕೆಗೆ. | ರೂ.28-00 | ರೂ.35.00 |
| 2 | ಟಿ.ಎ. ಮತ್ತು ಡಿ.ಎ. | ಇತರೆ ಮೌಲ್ಯಮಾಪಕರಿಗೆ ನೀಡಿದಂತೆ | ಇತರೆ ಮೌಲ್ಯಮಾಪಕರಿಗೆ ನೀಡಿದಂತೆ |
| 3 | ಉತ್ತರ ಪತ್ರಿಕೆಗಳ ಫೋಟೋಪ್ರತಿ ನೀಡುವ ಮತ್ತು ಮರುಮೌಲ್ಯಮಾಪನ ಕೆಲಸಗಳನ್ನು ನಿರ್ವಹಿಸುವ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸಂಭಾವನೆ | 46-00 ಒಂದು ಉತ್ತರ ಪತ್ರಿಕೆಗೆ | ರೂ.60-00 |

ವಿ ಸೂ :

1) ಪ್ರತಿ ತಂಡದವರು ಪ್ರತಿದಿನ ಮೌಲ್ಯಮಾಪನ ಮಾಡಬೇಕಾದ ಕನಿಷ್ಠ ಹಾಗೂ ಗರಿಷ್ಠ ಉತ್ತರ ಪತ್ರಿಕೆಗಳ ಸಂಖ್ಯೆಗಳನ್ನು ನಿರ್ದೇಶಕರು ನಿಗದಿಪಡಿಸತಕ್ಕದ್ದು.
2) ಯು 2ರ ಬಾಬ್ತಿನ ಒಟ್ಟು ಹಣವನ್ನು ಕೆಲಸ ನಿರ್ವಹಿಸಿದವರಿಗೆ ಅವರವರು ನಿರ್ವಹಿಸಿದ ಕೆಲಸದ ಪ್ರಮಾಣವನ್ನು ಅರಿತು ನಿರ್ದೇಶಕರು ಹಂಚಿಕೆ ಮಾಡುವರು.

| | | | |
|---|---|---|---|
| **ವಿ) ಪ್ರಾಯೋಗಿಕ ಪರೀಕ್ಷೆ ನಡೆಸುವ ಕಾಲೇಜು ಸಿಬ್ಬಂದಿಗೆ ಸಂಭಾವನೆ.** | | | |
| 1 | ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸುವ ಸಿಬ್ಬಂದಿಗೆ (ಪ್ರತಿ ತಂಡದಲ್ಲಿ ವಿದ್ಯಾರ್ಥಿಗಳ ಸಂಖ್ಯೆ 10ಕ್ಕಿಂತ ಕಡಿಮೆ ಇಲ್ಲದಂತೆ) | ರೂ.32-00 | ರೂ.40.00 |
| 2 | ಪೂರ್ವಭಾವಿ ಸಿದ್ಧತೆ, ಪರೀಕ್ಷೆ ನಡೆಸುವುದು ಹಾಗೂ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡುವುದು<br>(ಪ್ರತಿ ತಂಡದಲ್ಲಿ ವಿದ್ಯಾರ್ಥಿಗಳ ಸಂಖ್ಯೆ 10ಕ್ಕಿಂತ ಕಡಿಮೆ ಇಲ್ಲದಂತೆ) | ರೂ.6-00(ಪ್ರತಿ ವಿದ್ಯಾರ್ಥಿಗೆ)<br>ರೂ.7-00 (ಕನಿಷ್ಠ)<br>ರೂ.56-00 (ಪ್ರತಿ ವಿಷಯಕ್ಕೆ) | ರೂ.7.50<br>ರೂ.10.00<br>ರೂ.75.00 |
| 3 | ದ್ವಿತೀಯ ಪಿಯುಸಿ ಪ್ರಾಯೋಗಿಕ ಪರೀಕ್ಷೆಯ ಕೆಲಸ ಕಾರ್ಯ ನಿರ್ವಹಿಸುವ ಗ್ರೂಪ್-ಡಿ ಸಿಬ್ಬಂದಿಗೆ ಸಂಭಾವನೆ | ರೂ.13-00(ಪ್ರತಿ ತಂಡಕ್ಕೆ ಸಿಬ್ಬಂದಿಗೆ ಒಬ್ಬರಿಗೆ) | ರೂ.17.00 |
| 4 | ದ್ವಿತೀಯ ಪಿಯುಸಿ ಪ್ರಾಯೋಗಿಕ ಪರೀಕ್ಷೆಯ ಕೆಲಸ ನಿರ್ವಹಿಸುವ ಕ್ಲರ್ಕ್ ಕಂ ಟೈಪಿಸ್ಟ್ ಸಿಬ್ಬಂದಿಗೆ ಸಂಭಾವನೆ | ರೂ.8-00(ಪ್ರತಿ ತಂಡಕ್ಕೆ ಒಬ್ಬರಂತೆ) | ರೂ.10.00 |
| 5. | ಪ್ರಾಯೋಗಿಕ ಪರೀಕ್ಷೆ ನಡೆಸುವ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರಿಗೆ | ರೂ.11-00 ಪ್ರತಿ ತಂಡಕ್ಕೆ ಕನಿಷ್ಠ<br>ರೂ.46-00 ಗರಿಷ್ಠ<br>ರೂ.116-00 ಎಲ್ಲಾ ವಿಷಯಗಳೂ ಸೇರಿ | ರೂ.15.00 ಪ್ರತಿ ತಂಡಕ್ಕೆ ಕನಿಷ್ಠ<br>ರೂ.60.00 ಪ್ರತಿ ತಂಡಕ್ಕೆ ಕನಿಷ್ಠ<br>ರೂ.150.00 ಪ್ರತಿ ತಂಡಕ್ಕೆ ಕನಿಷ್ಠ |

| | | | |
|---|---|---|---|
| 6 | ಪ್ರಾಯೋಗಿಕ ಪರೀಕ್ಷೆ ನಡೆಸಲು ನೀಡುವ ಸಾದಿಲ್ವಾರು ವೆಚ್ಚ | ಪ್ರತಿ ವಿದ್ಯಾರ್ಥಿಗೆ,<br>ಪ್ರತಿ ವಿಷಯಕ್ಕೆ<br>ರೂ.5-00 | ರೂ.7.00 |

**ವಿಶೇಷ ಸೂಚನೆ :**
ಮೇಲ್ಕಂಡ ಪರೀಕ್ಷಾ ಕಾರ್ಯದಲ್ಲಿ ಭಾಗವಹಿಸುವ ಸಿಬ್ಬಂದಿಯವರಿಗೆ ಪ್ರಯಾಣಭತ್ಯೆ ಮತ್ತು ದಿನಭತ್ಯೆಯನ್ನು ಕ.ನಾ.ಸೇ. ನಿಯಮಾವಳಿ ರೀತ್ಯ ನೀಡಲಾಗುವುದು

| ಡಬ್ಲ್ಯೂ) ಪ್ರಾಯೋಗಿಕ ಪರೀಕ್ಷಾ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಸಂಭಾವನೆ. | | | |
|---|---|---|---|
| 1 | ಉಪನಿರ್ದೇಶಕರು<br>20 ಪ್ರಾಯೋಗಿಕ ಪರೀಕ್ಷಾ ಕೇಂದ್ರಗಳವರೆಗೆ<br>20ಕ್ಕೂ ಮೇಲ್ಪಟ್ಟು ಪರೀಕ್ಷಾ ಕೇಂದ್ರಗಳಿರುವಲ್ಲಿ | ರೂ.2156-00<br>ರೂ.2926-00 | ರೂ.2805.00<br>ರೂ.3805.00 |
| 2 | ಕೋ-ಆರ್ಡಿನೇಟರ್ಸ್ (ಸಂಚಾಲಕರು)<br>20 ಪ್ರಾಯೋಗಿಕ ಪರೀಕ್ಷಾ ಕೇಂದ್ರಗಳವರೆಗೆ<br>20ಕ್ಕೂ ಮೇಲ್ಪಟ್ಟು ಪರೀಕ್ಷಾ ಕೇಂದ್ರಗಳಿರುವಲ್ಲಿ<br>40ಕ್ಕೂ ಮೇಲ್ಪಟ್ಟು ಪರೀಕ್ಷಾ ಕೇಂದ್ರಗಳಿರುವಲ್ಲಿ | ರೂ.1078-00<br>ರೂ.1540-00<br>ರೂ.2002-00 | ರೂ.1400.00<br>ರೂ.2000.00<br>ರೂ.2605.00 |
| 3 | ಸದಸ್ಯರು (ಗರಿಷ್ಠ ಪ್ರತಿ ವಿಷಯಕ್ಕೆ ಇಬ್ಬರು)<br>20 ಪ್ರಾಯೋಗಿಕ ಪರೀಕ್ಷಾ ಕೇಂದ್ರಗಳವರೆಗೆ<br>20ಕ್ಕೂ ಮೇಲ್ಪಟ್ಟು ಪರೀಕ್ಷಾ ಕೇಂದ್ರಗಳಿರುವಲ್ಲಿ | ರೂ.893-00<br>ರೂ.1263-00 | ರೂ.1160.00<br>ರೂ.1640.00 |
| 4 | ಉಪನಿರ್ದೇಶಕರ ಕಛೇರಿ ಸಿಬ್ಬಂದಿ (ಇಬ್ಬರು)<br>20 ಪ್ರಾಯೋಗಿಕ ಪರೀಕ್ಷಾ ಕೇಂದ್ರಗಳವರೆಗೆ<br>20ಕ್ಕೂ ಮೇಲ್ಪಟ್ಟು ಪರೀಕ್ಷಾ ಕೇಂದ್ರಗಳಿರುವಲ್ಲಿ | ರೂ.616-00<br>ರೂ.1078-00 | ರೂ.800.00<br>ರೂ.1400.00 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

24/3/16

(ವಿ.ರಾಮಕೃಷ್ಣಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇ ಲಾಖೆ(ಪದವಿ ಪೂರ್ವ ಶಿಕ್ಷಣ)